# ಗೋ ವಿಶ್ವ

Cow Universe

गौ विश्व

ವಿರೋಧಿ ಸಂವತ್ಸರ ಆಶ್ವಯುಜ ಸಪ್ಟಂಬರ್ ೨೦೦೯ ಸಂಪುಟ–೩ ಸಂಚಿಕೆ–೯


ಗುರುವಾಣಿ

## ಗೋ ಗ್ರಾಮ ಯಾತ್ರೆ ಈಗಲ್ಲದಿದ್ದರೆ ಇನ್ನಾವತ್ತೂ ಬೇಕಿಲ್ಲ



ನಮ್ಮ ಗೋಮಾತೆ ವಿನಾಶದ ಕೊಟ್ಟ ಕೊನೆಯ ಅಂಚಿನಲ್ಲಿ ನಿಂತಿದ್ದಾಳೆ. ಗೋ ಸಂರಕ್ಷಣೆಗೆ ಇಂದಲ್ಲದಿದ್ದರೆ ಇನ್ನಾವತ್ತೂ ಅವಕಾಶ ಸಿಗಲಾರದು. ಇಂದು ಮಲಗಿ, ಮುಂದೆ ಪಶ್ಚಾತ್ತಾಪ ಪಟ್ಟರೂ ಅವಕಾಶ ಸಿಗಲಾರದು. ಅದಕ್ಕಾಗಿ ಕೊಟ್ಟ ಕೊನೆಯ ಅವಕಾಶವಾಗಿ ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ ಹೊರಡುತ್ತಿದೆ.

ಅಂದು ಮಹಾಭಾರತದ ಸಂದರ್ಭದಲ್ಲಿ ಗೋಗ್ರಹಣದ ವರೆಗೆ ವೀರಾಧಿವೀರ ಅರ್ಜುನ ನಪುಂಸಕನಾಗಿದ್ದ. ಗೋ ಸಂರಕ್ಷಣೆಯ ಕಾರ್ಯ ಎದುರಾದಂತೆಯೇ ಪೌರುಷವನ್ನು ಆಹ್ವಾನಿಸಿಕೊಂಡು, ಗೋ ಹಿಂಸಕ ಕುರು ಪುತ್ರರನ್ನು ಸದೆಬಡಿದ.

ಇಂದೂ ಅಷ್ಟೇ, ಗೋಗ್ರಹಣದ ಮಾದರಿಯ ಸನ್ನಿವೇಶ ಎದುರಾಗುತ್ತಿದೆ. ನಮ್ಮೆಲ್ಲರನ್ನೂ ಸಕಲ ರೀತಿಯಿಂದಲೂ ಸಾಕಿ–ಸಲಹುವ ಆ ಮಹಾಮಾತೆ ಗೋಮಾತೆ ಸಂಕಷ್ಟದಲ್ಲಿದ್ದಾಳೆ. ಅವಳ ಹಾಲು ಕುಡಿದು ವೀರ, ಶೂರ, ಪ್ರತಿಭಾವಂತರಾದ ನಾವು ಉಪೇಕ್ಷೆಯನ್ನು ತಾಳುತ್ತಿದ್ದೇವೆ. ಇದು ತರವಲ್ಲ. ಇದರ ಬಿಸಿ ತೀಕ್ಷ್ಣವಾಗಿ ತಟ್ಟಿಯೇ ತಟ್ಟುತ್ತದೆ.

ಸ್ವಾತಂತ್ರ್ಯ ಬರುವಾಗ ಇದ್ದ ಗೋವಂಶದಲ್ಲಿ 80%ರಷ್ಟು ನಷ್ಟವಾಗಿದೆ. ನೂರಾರಿದ್ದ ತಳಿಗಳು 30ಕ್ಕೆ ಇಳಿದಿವೆ. ಕೃಷ್ಣಾ ತೀರ, ವೆಚೂರು ಮೊದಲಾದ ಹಸುಗಳ ಸಂಖ್ಯೆ ಕೇವಲ 10–15ಕ್ಕೆ ಕುಸಿದಿದೆ. ಸುಮ್ಮನೆ ಕೂತರೆ ಸದ್ಯದಲ್ಲಿಯೇ ವಿನಾಶ ಕಟ್ಟಿಟ್ಟ ಬುತ್ತಿ.

**ಆದ್ದರಿಂದ ಜಾಗೃತರಾಗಲೇಬೇಕು. ಗೋವು–ರೈತ–ಗ್ರಾಮ–ಪ್ರಕೃತಿ–ವಿಶ್ವದ ನಡುವಿನ ಕೊಂಡಿಯನ್ನು ಮತ್ತೆ ನವಿರಾಗಿ ಬೆಸೆಯಲೇಬೇಕು. ಏಕೆಂದರೆ ಅಂತಿಮವಾಗಿ ಗೋಮಾತೆ ಎಲ್ಲದಕ್ಕೂ ಆತ್ಮದ ಸ್ಥಾನವನ್ನು ಅಲಂಕರಿಸುತ್ತಾಳೆ. ಆತ್ಮವನ್ನು ಅಲಕ್ಷಿಸಿ ಏನನ್ನೂ ಮಾಡಾಲಾಗುವುದಿಲ್ಲ.**

ಕಾಮಧೇನು ಸ್ವರ್ಗದಲ್ಲಿರುತ್ತಾಳೆ ಎಂಬ ದರ್ಶನ ಜನಜನಿತ. ಅಷ್ಟೇ ಅಲ್ಲ. ಗೋಮಾತೆಯ ಪಾದ ಸ್ಪರ್ಶ ಮಾತ್ರದಿಂದಲೇ ಭೂಮಿ ಪಾವನವಾಗುವುದರಿಂದ ಅವಳು ಹೋದಲ್ಲೆಲ್ಲ ಸ್ವರ್ಗ ನೆಲೆಗೊಳ್ಳುತ್ತದೆ. ಅಂತಹ ಸ್ವರ್ಗದ ಮರು ಸ್ಥಾಪನೆಗೆ ಅವ್ಯಾಹತ ಗೋಹತ್ಯೆ ನಿಲ್ಲಲೇಬೇಕು.

ಅದಕ್ಕಾಗಿ ಈ ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ ಪರಮ ಪೂಜ್ಯ ಸಂತರ ನೇತೃತ್ವದಲ್ಲಿ ಹೊರಡುತ್ತಿದೆ. ಗೋವು, ಗ್ರಾಮ, ಪ್ರಕೃತಿಯ ಕಡೆಗೆ ಮತ್ತೆ ಮರಳುವ ಮಂಗಲ ಸಂದೇಶವನ್ನು ಹೊತ್ತು ಮನೆ, ಮನ ತಲುಪಲಿದೆ.

ಎಲ್ಲರೂ ಪಾಲ್ಗೊಂಡು ಪಾವನರಾಗಿ.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ


### ಹೂರಣ


ಗುರುವಾಣಿ
ಪ್ರಶ್ನೋತ್ತರ
ಮಾಸದ ಗೋವು: ಬಚೌರ್
ಆನಂದದಾಯಕ ಪ್ರೇಮದ ಕಡಲಲ್ಲಿ ಮೀಯಲು ಒಂದು ಆತ್ಮೀಯ ಕರೆ
ಶ್ರೀ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿಯವರ ಸಂದರ್ಶನ
ಮೊಳಗಿತು ಗೋಗ್ರಾಮ ಯಾತ್ರೆಯ ಶಂಖನಾದ



ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org
ಸಂಪರ್ಕ: govishva@gmail.com




## ಪ್ರಶ್ನೋತ್ತರ

ಪ್ರ: ಭಾರತೀಯ ಗೋ ತಳಿಗಳ ಅವನತಿಗೆ ಪ್ರಮುಖ ಕಾರಣಗಳೇನು ?

ಉ: ಭಾರತೀಯ ಗೋ ತಳಿಗಳ ಅವನತಿ 1950 ರಿಂದಲೇ ಪ್ರಾರಂಭವಾಯಿತು. ಹಸಿರು ಕ್ರಾಂತಿಯಿಂದ ವೇಗ ಪಡೆಯಿತು. ಗೋ ಆಧಾರಿತ ಸಾವಯವ ಹಾಗೂ ಸುಸ್ಥಿರ ಕೃಷಿ ವ್ಯವಸ್ಥೆಯ ಬದಲು ಕೇಂದ್ರ ಸರಕಾರ, ಪಾಶ್ಚಿಮಾತ್ಯರ ಪ್ರಭಾವಕ್ಕೆ ಸಿಕ್ಕು ರಾಸಾಯನಿಕ ಹಾಗೂ ಟ್ರ್ಯಾಕ್ಟರ್ ಆಧಾರಿತ ಅವೈಜ್ಞಾನಿಕ ಹಾಗೂ ಅಸ್ಥಿರ ಕೃಷಿಗೆ ಉತ್ತೇಜನ ನೀಡಲು ತೊಡಗಿದ್ದು ಮೊದಲನೇ ಕಾರಣ.

1960ರ ದಶಕದಲ್ಲಿ ಪ್ರಾರಂಭವಾದ **"ಶ್ವೇತ ಕ್ರಾಂತಿ"** ಎರಡನೇಯ ಮುಖ್ಯ ಕಾರಣ. ಭಾರತೀಯ ಹಸುಗಳ ತಳಿ ಶುದ್ಧತೆ ಕಾಪಾಡಿಕೊಂಡೇ, ಅವುಗಳ ಹಾಲು ನೀಡುವ ಸಾಮರ್ಥ್ಯ ಹೆಚ್ಚಿಸುವಂಥ ಸಂಶೋಧನೆಗಳ ಬದಲು ಸುಲಭವಾದ ರೆಡಿಮೇಡ್ ಪರಿಹಾರಕ್ಕೆ ಸರಕಾರ ಕೈ ಹಾಕಿತು.

ಪ್ರ: ಶ್ವೇತ ಕ್ರಾಂತಿಯು ಭಾರತೀಯ ಗೋ ತಳಿಗಳ ಅವನತಿಗೆ ಹೇಗೆ ಕಾರಣವಾಯಿತು ?

ಉ: ಭಾರತದಲ್ಲಿ ಹಾಲಿನ ಉತ್ಪಾದನೆ ಹೆಚ್ಚಿಸಲು ಜರ್ಸಿ, ಎಚ್. ಎಫ್. ಮುಂತಾದ ವಿದೇಶೀ ತಳಿ ಹೋರಿಗಳ ವೀರ್ಯದಿಂದ ಭಾರತೀಯ ತಳಿಯ ಹಸುಗಳಿಗೆ ಕೃತಕ ಗರ್ಭದಾನ ಕಾರ್ಯಕ್ರಮವನ್ನು ದೇಶವ್ಯಾಪಿಯಾಗಿ ಕೈಗೊಳ್ಳಲಾಯಿತು. ಇದರ ಫಲವಾಗಿ ಹಸುಗಳನ್ನು ಹಾಲು ಕೊಡುವ ಯಂತ್ರವಾಗಿ ನೋಡುವ ಪರಿಪಾಠ ಬೆಳೆಯಿತು. ಹೀಗೆ **"ಹಸಿರು ಕ್ರಾಂತಿ ಹಾಗೂ ಶ್ವೇತ ಕ್ರಾಂತಿ"** ಗಳು ಭಾರತೀಯ ಗೋ ತಳಿಗಳ ಪಾಲಿಗೆ ಮರಣದಂಡನೆಯಾದವು.

**– ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 24ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com

ಮಾಸದ ಗೋವು

# ಬಚೌರ್

**ಉತ್ತಮ ಕೆಲಸಗಾರ ತಳಿ ಎಂದು ಈಸ್ಟ್ ಇಂಡಿಯಾ ಕಂಪೆನಿಯ ಕಾಲದಿಂದಲೇ ಖ್ಯಾತವಾಗಿದ್ದ ಬಚೌರ್ ಈ ತಿಂಗಳ ಮಾಸದ ಗೋವು. ಗಾಡಿ ಎಳೆಯಲು ತುಂಬ ಹೆಸರುವಾಸಿಯಾಗಿದ್ದ ಈ ತಳಿಯ ಎತ್ತುಗಳಿಗೆ ಹತ್ತೊಂಬತ್ತನೆಯ ಶತಮಾನದ ಮಧ್ಯಕಾಲದ ತನಕವೂ ತುಂಬ ಬೇಡಿಕೆಯಿತ್ತು**

ಹರಿಯಾಣಿ ತಳಿಯ ಸಾಮ್ಯತೆಯನ್ನು ಹೊಂದಿ, ಅದರೊಟ್ಟಿಗೆ ತನ್ನದೇ ಕೆಲವು ವಿಶೇಶತೆಗಳನ್ನು ಹೊಂದಿದ ಒಂದು ಉತ್ತಮ ಕೆಲಸಗಾರ ತಳಿ ಬಚೌರ್. ಇದೆಂತಾ ಉಪಯುಕ್ತ ಕೆಲಸಗಾರ ತಳಿಯೆಂದರೆ ಜಾನುವಾರು ಸಂತೆ 'ಹಟಿಯಾ'ಗಳಲ್ಲಿ



**ಬಚೌರ್, ಬಿಹಾರ**

ಇದರ ಬೆಲೆ ಬರೊಬ್ಬರಿ 35 ಸಾವಿರದಿಂದ ಪ್ರಾರಂಭ!

ಬಚೌರ್ ತಳಿಯ ಮೂಲ ಬಿಹಾರಿನ ಸೀತಾಮಾರಿ, ಮಧುಬನಿ, ದರ್ಭಾಂಗ ಪ್ರಾಂತ್ಯಗಳೆಂದು ಊಹಿಸಲಾಗಿತ್ತದರೂ ದೊಡ್ಡ ಮಂದೆಗಳಲ್ಲಿ ಸಾಕುವವರು ಅಪರೂಪ. ಕುಟುಂಬದಲ್ಲಿ 4–5 ಹಸುಗಳು ಸಾಮಾನ್ಯ. ಇವರ ಸಾಕಣಿಕೆಯ ಮತ್ತೊಂದು ವಿಶೇಷವೆಂದರೆ ಹಸುಗಳಿಗೆ ಹೋರಿಗರು ಹುಟ್ಟಿದರೆ ಇವರು ಆ ಹಸುವಿನ ಹಾಲನ್ನು ಉಪಯೋಗಿಸುವುದೇ ಇಲ್ಲ. ಎಲ್ಲ ಹಾಲೂ ಕರುವಿಗೆ ಸೀಮಿತ. ಇವರಲ್ಲಿ ಒಂದು, ಒಂದೂವರೆ ವರ್ಷಕ್ಕೆ ಕೊಡು ಸುಡುವ ಸಂಪ್ರದಾಯವಿದೆ.

**ಮೂಲ: ಬಿಹಾರ**
**ವಿಭಾಗ: ಕೆಲಸಗಾರ**
**ಧೃಡ ಶರೀರ**
**ಎತ್ತರ: ಸುಮಾರು ೧೧೦ ಸೆ.ಮಿ.**
**ಬಣ್ಣ: ಬಿಳಿ**
**ಮುಖ: ದೊಡ್ಡ ಕಣ್ಣು, ನೇರವಾದ ಕಿವಿ**
**ಕೊಂಬು: ಗಿಡ್ಡ ಅರ್ಧವೃತ್ತಾಕೃತಿ**
**ಕಾಲು: ಮಧ್ಯಮ ಗಾತ್ರ**

ನೆಟ್ಟನೆ ನಡುವಿನ, ಸಣ್ಣ ಕುತ್ತಿಗೆಗಳ, ದೊಡ್ಡ ಕಣ್ಣುಗಳ,



ನೇರವಾದ ಸಣ್ಣ ಕಿವಿಗಳ ಧೃಡ ಶರೀರಿ ಬಚೌರ್ ತಳಿಯ ಆಹಾರ ಅತ್ಯಲ್ಪ. ಹೋರಿಗಳು ಅಜವಾಸು 110 ಸೆಂಟೀಮೀಟರ್‌ಗಳು.

ಹಸುಗಳು 10–20 ಸೆ.ಮೀ. ಕಮ್ಮಿ. ಬಣ್ಣ ಬಿಳಿ.

ಇವು ಗಾಡಿ ಎಳೆಯುವುದಕ್ಕೆ ಖ್ಯಾತವಾಗಿದ್ದವು. ಎಷ್ಟರ ಮಟ್ಟಿಗೆ ಎಂದರೆ 19ನೆಯ ಶತಮಾನದ ಪ್ರಾರಂಭದ ಕಾಲದಲ್ಲಿ ಅಧಿಕ ಸಂಖ್ಯೆಯಲ್ಲಿ ಈ ಎತ್ತುಗಳಿಗೆ ಬೇಡಿಕೆಯಿತ್ತು. ಇವುಗಳ ಒಂದು ಜೋಡಿ ಎತ್ತುಗಳು 2–3 ಟನ್ ತೂಕದ ಗಾಡಿಯನ್ನು ಆರಾಮವಾಗಿ ಎಳೆಯಬಲ್ಲವು.

**– ಮಧುಕೇಶ ದೊಡ್ಡೇರಿ**



ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ

# ಆನಂದದಾಯಕ ಪ್ರೇಮದ ಕಡಲಲ್ಲಿ ಮೀಯಲು ಒಂದು ಆತ್ಮೀಯ ಕರೆ





**ಆತ್ಮೀಯರೇ,**

ವಂದೇ ಗೋ ಮಾತರಂ.

30ನೇ ಸಪ್ಟೆಂಬರ್ 2009ರಿಂದ ಆರಂಭಿಸಿ 108 ದಿನಗಳ ಕಾಲ 'ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ' ನಡೆಯಲಿದೆ. ಯಾತ್ರೆ ಗೋ, ಗ್ರಾಮಗಳ ಪುನಶ್ಚೇತನ ಹಾಗೂ ಅಂತಿಮವಾಗಿ ವಿಶ್ವದ ಮಂಗಳವನ್ನು ತನ್ನ ಆಸೆ, ಆಶಯವಾಗಿ ಹೊತ್ತು ಹೊರಡುತ್ತಿದೆ. ಈ ಯಾತ್ರೆ ಭಾರತದ ಗಿರಿ-ಕಂದರಗಳ ಮೂಲಕ ಸಾಗಿ, ನದಿ-ಸರೋವರಗಳ ಮೇಲೆ ಪಯಣಿಸಿ, ಗ್ರಾಮ-ನಗರಗಳನ್ನು ಪ್ರವೇಶಿಸಿ ಎಲ್ಲರಲ್ಲೂ ಉದಾತ್ತ ಭಾವವನ್ನು ಮೊಳೆಸುವ ಉದ್ದೇಶವನ್ನು ತನ್ನದಾಗಿಸಿಕೊಂಡಿದೆ.

ಇದಕ್ಕಾಗಿ ಭಾರತದ ಎಲ್ಲ ಬಗೆಯ ಗೋ ಪ್ರೇಮಿಗಳೂ ಒಂದೇ ಛತ್ರದಡಿ ಸೇರುತ್ತಿರುವುದು ಹೇಳಲೇಬೇಕಾದ ಸಂಗತಿ. ಪೂಜ್ಯ ಜಗದ್ಗುರು ಶಂಕರಾಚಾರ್ಯ ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿಯವರ ಸಂಕಲ್ಪಕ್ಕೆ ಎಲ್ಲರ ಸಾಥ್ ಸಿಗುತ್ತಿದೆ. ಯಾತ್ರೆಯ ಬೆನ್ನೆಲುಬಾಗಿ ದೇಶದ ಇಡೀ ಸಂತ ಮಂಡಲವೇ ನಿಂತಿದೆ.

ಅಂದು ನಮ್ಮೆಲ್ಲರ ಗಾಂಧೀ ತಾತ 'ಚರಕ'ವನ್ನು ಮುಂದಿಟ್ಟು ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಟ್ಟರು. ದುರ್ಭಾಗ್ಯವೆಂದೇ ಹೇಳಬೇಕು. ಅದನ್ನು ದಕ್ಕಿಸಿಕೊಳ್ಳಲಾಗಲಿಲ್ಲ. ಆದ್ದರಿಂದ ಕಾಗದ-ಪತ್ರಗಳಲ್ಲಿ ಉಳಿದಿರುವ ಸ್ವಾತಂತ್ರ್ಯವನ್ನು ಮೈ-ಮನಗಳಿಗೆ ಹರಿಸುವ ಸಂಕಲ್ಪ ಆಗಿದೆ. ರಾಷ್ಟ್ರದ ಧಮನಿ-ಧಮನಿಗಳಲ್ಲಿ ಹರಿಯುತ್ತಿರುವ 'ಗೋಮಾತೆ' ಈ ಯಾತ್ರೆಯ ನೇತೃತ್ವ ವಹಿಸಲಿದ್ದಾಳೆ. ನಿಜವಾದ ಸ್ವಾತಂತ್ರ್ಯಕ್ಕಾಗಿ ದೇಶದ ಉದ್ದಗಲಗಳನ್ನು ಒಗ್ಗೂಡಿಸಲಿರುವ ಈ ಯಾತ್ರೆ 'ಎರಡನೇ ಸ್ವಾತಂತ್ರ್ಯ ಸಂಗ್ರಾಮ'ವಾಗಲಿದೆ.




ಪರಸ್ಪರ ಅರ್ಥಮಾಡಿಕೊಂಡು, ಪ್ರಕೃತಿಯ ಸದಾಶಯಕ್ಕೆ ನೀರೆರೆಯುವ ಈ ಯಾತ್ರೆ ನಮ್ಮ, ಗೋಮಾತೆಯ, ಅಷ್ಟೇ ಏಕೆ ಸಮಗ್ರ ಪ್ರಕೃತಿಯ ಸಂಕಟ ವಿಮೋಚನೆಯ ಮಹತ್ಕಾರ್ಯದಲ್ಲಿ ಮಹತ್ತ್ವದ ಮೈಲಿಗಲ್ಲಾಗಲಿದೆ.

ಇದು ಕೈಕಟ್ಟಿ ಕೂರುವ ಗಳಿಗೆಯಲ್ಲ. ನಮ್ಮೆಲ್ಲರ ಉದ್ಧಾರಕ್ಕೆ ನಾವೇ ಪ್ರಯತ್ನಿಸಬಹುದಾದ ಒಂದು ಸಾರ್ವತ್ರಿಕ ಸದವಕಾಶ. ಯಾತ್ರೆ, ಸಂಗ್ರಾಮ ಎಂದ ಮಾತ್ರಕ್ಕೆ ಇದ್ದುಬದ್ದ ಎಲ್ಲ ಕೆಲಸ-ಕಾರ್ಯಗಳನ್ನೂ ಬಿಟ್ಟು ಓಡೋಡಿ ಬರಬೇಕು ಎಂದು ಆಶಿಸುತ್ತಿಲ್ಲ. ನೀವಿರುವಲ್ಲಿಂದಲೇ, ನಿಮಗೆ ಸಾಧ್ಯವಾಗುವ ರೀತಿಯಲ್ಲಿಯೇ ಈ ಸತ್ಕಾರ್ಯದಲ್ಲಿ ಸಕ್ರಿಯರಾಗುವ ಸಂಕಲ್ಪ ಮಾಡಿ. ಒಂದಲ್ಲ, ನೂರು ಮಾರ್ಗಗಳು ಬಿಚ್ಚಿಕೊಳ್ಳುತ್ತವೆ.

ಯಾತ್ರೆ ನಿಮಲ್ಲಿಗೆ ಬಂದಾಗ ನೀವೂ ನಮ್ಮೊಂದಿಗಿರಿ. ಅಲ್ಲಿ ನಾವೆಲ್ಲರೂ ಸೇರಿ 'ಸುಂದರ ಜೀವನ ನಿರ್ಮಾಣದ ಸಂಕಲ್ಪ'ವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳೋಣ.

ಆನಂದದಾಯಕ ಪ್ರೇಮದ ಹಂಬಲದಲ್ಲಿ...

**- ಸಮಸ್ತ ಗೋ ಪ್ರೇಮಿಗಳು**

# ಶ್ರೀ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿಯವರ ಸಂದರ್ಶನ

**ಗೋವಿಶ್ವ ಪತ್ರಿಕೆಗೆ ೨ ವರ್ಷ ತುಂಬಿರುವ ಸಂದರ್ಭದಲ್ಲಿ ಪತ್ರಿಕೆಯ ಸಂಪಾದಕ ಡಾ. ಯು.ಬಿ. ಪವನಜ ಅವರು ಶ್ರೀ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿಯವರೊಡನೆ ನಡೆಸಿದ ಸಂದರ್ಶನ**



ಪ್ರ: ಗೋವಿಶ್ವ ಪತ್ರಿಕೆಗೆ ಎರಡು ವರ್ಷ ತುಂಬಿತು. ಇದುವರೆಗೆ ಬಂದ ಸಂಚಿಕೆಗಳ ಗುಣಮಟ್ಟ, ಮಾಡಿರುವ ಸಾಧನೆ ತಮಗೆ ತೃಪ್ತಿ ತಂದಿದೆಯೇ?

ಉ: ಹ್ಞೂಂ. ಖಂಡಿತವಾಗಿಯೂ ತೃಪ್ತಿ ತಂದಿದೆ.

ಪ್ರ: ಗೋವಿಶ್ವ ಪತ್ರಿಕೆಯಲ್ಲಿ ಬಂದಿರುವ ಲೇಖನಗಳ ವಿಷಯವ್ಯಾಪ್ತಿ, ಲೇಖನಗಳ ಗುಣಮಟ್ಟ, ತಮಗೆ ತೃಪ್ತಿ ನೀಡಿದೆಯೇ?

ಹೌದು. ಖಂಡಿತವಾಗಿ ತೃಪ್ತಿ ತಂದಿದೆ. ಯಾಕೆಂದರೆ ಇದು ಮೊದಲನೆಯ ಪ್ರಯತ್ನ. ಗೋವಿನ ಬಗ್ಗೆ ಒಂದು ಪತ್ರಿಕೆ ತಂದಿದ್ದು ಅದರಲ್ಲೂ e–ಪತ್ರಿಕೆ ತಂದಿದ್ದು ಇದು ಮೊದಲನೆಯ ಪ್ರಯತ್ನ. ಮೊದಲನೆಯ ಪ್ರಯತ್ನದಲ್ಲಿ ಮಾಡಿದ ಸಾಧನೆ ತೃಪ್ತಿ ತಂದಿದೆ.

ಪ್ರ: ವಿಶ್ವ ಗೋಸಮ್ಮೇಳನದಿಂದ ಪ್ರಾರಂಭಿಸಿ, ಕೋಟಿ ನೀರಾಜನ, ಗೋರಥಯಾತ್ರೆ, ವಿಶ್ವ ಮಂಗಲ ಗೋಗ್ರಾಮ ಯಾತ್ರೆ, ಹೀಗೆ ಹಲವು ರೀತಿಯಲ್ಲಿ ಜನಜಾಗೃತಿ ಆಗಿದೆ. ಈ ಸಾಧನೆ ತಮಗೆ ತೃಪ್ತಿದಾಯಕವಾಗಿದೆಯೇ?

ಉ: ಇಲ್ಲ. ಒಬ್ಬ ಸಂತನಾಗಿ ಏನು ಮಾಡಿದರೂ ತೃಪ್ತಿ ಪಡಬೇಕಾದದ್ದು ಸ್ವಭಾವ. ಆದರೆ ಒಬ್ಬ ಪ್ರಯತ್ನಶೀಲನಾಗಿ ನಾವು ಇನ್ನಷ್ಟು ಪ್ರಯತ್ನ ಮಾಡಬಹುದಾಗಿತ್ತು. ಯಾಕೆಂದರೆ ಪ್ರತಿದಿನವೂ ಲಕ್ಷಾಂತರ ಗೋವುಗಳು ನಾಶವಾಗುವುದರಿಂದ ಆ ದಿಸೆಯಲ್ಲಿ ನಮ್ಮ ಪ್ರಯತ್ನ ಸಾಕಾಗಲಿಲ್ಲವೇನೋ? ಯಾಕೆಂದರೆ ನಮ್ಮ ಪ್ರಯತ್ನ ಇರುವುದು ಗೋವುಗಳನ್ನು ಉಳಿಸಲು.

ಪ್ರ: ಗೋ ಜಾಗೃತಿ ಬಗ್ಗೆ ಇನ್ನು ಏನೇನು ಕೆಲಸಗಳು ಆಗಬೇಕಾಗಿವೆ?

ಉ: ಉದ್ಯಮ ಮತ್ತು ಜ್ಞಾನ –ಈ ಎರಡು ಮುಖ್ಯವಾದ ವಿಷಯಗಳು. ಉದ್ಯಮ ಬೆಳೆಯಬೇಕು. ಅಂದರೆ ಗೋವು ಆಧಾರಿತ ಜೀವನಕ್ಕೆ ಪೂರಕವಾದ ಉದ್ಯಮ ಬೆಳೆಯಬೇಕು. ಮತ್ತು ಜನರಲ್ಲಿ ಈ ಬಗ್ಗೆ ಸಾಕಷ್ಟು ತಿಳಿವಳಿಕೆ ಬೆಳೆಯಬೇಕು. ಗೋವಿನ ಉಪಯೋಗಗಳ ಬಗ್ಗೆ ಜನರಲ್ಲಿ ಅರಿವು ಮೂಡಬೇಕಾಗಿದೆ.

ಪ್ರ: ಇಂದಿನ ಆಧುನಿಕ ಕೈಗಾರಿಕಾ ಜೀವನ, ಯಾಂತ್ರೀಕೃತ ಕೃಷಿಯ ಕಾಲದಲ್ಲಿ ಗೋ ಆಧಾರಿತ ಜೀವನ ನಿಜಕ್ಕೂ ಎಷ್ಟರ ಮಟ್ಟಿಗೆ ಸಾಧ್ಯ?

ಉ: ಈಗ ಇದು ಹೆಚ್ಚು ಪ್ರಸ್ತುತ. **ಯಾವ ಕಾಲ ಬಂದರೂ, ಎಷ್ಟೇ ತಂತ್ರಜ್ಞಾನ ಬಂದರೂ ಜೀವನ ಮಾಡಲು ಅನ್ನ ಬೇಕೇ ಬೇಕು. ಅನ್ನಕ್ಕೆ ಗೋವು ಬೇಕೇ ಬೇಕು.** ಗೋವು ಇಲ್ಲದ ಅನ್ನ ಅದು ವಿಷವಾಗಿರುತ್ತದೆಯೇ ಹೊರತು ಆಹಾರವಾಗಿರುವುದಿಲ್ಲ. ಗೋವು ಯಾವ ಯಾವ ವಿಷಯಗಳಲ್ಲಿ ನಮಗೆ ಉಪಕಾರ ಮಾಡುತ್ತಿದೆಯೋ ಆ ವಿಷಯಗಳೆಲ್ಲ ಎಂದೆಂದಿಗೂ ಪ್ರಸ್ತುತವೇ. ಈ ಯಾಂತ್ರೀಕೃತ ಕೃಷಿಯಿಂದ ತುಂಬ ನಷ್ಟಗಳಾಗಿವೆ. ಸೂಕ್ಷ್ಮ ಜೀವಿಗಳು ಸಾಯುತ್ತವೆ. ಅಂತರ್ಜಲ ಇನ್ನಷ್ಟು ಕೆಳಗೆ ಹೋಗುತ್ತದೆ. ಭೂಮಿಯ ನೀರು ಧಾರಣ ಶಕ್ತಿ ಕಡಿಮೆಯಾಗುತ್ತದೆ. ಗೋಮಾತೆಯಿಂದ ಎಲ್ಲ ಲಾಭವೇ. ಸೂಕ್ಷ್ಮ ಜೀವಿಗಳ

ವೃದ್ಧಿಯಾಗುತ್ತದೆ. ಗೋಮೂತ್ರದಿಂದ ಭೂಮಿ ಮೃದುವಾಗುತ್ತದೆ. ಅಂತರ್ಜಲ ಮೇಲಕ್ಕೆ ಬರುತ್ತದೆ. ಮಣ್ಣಿನ ನೀರಿನ ಹಿಡಿದಿಡುವಿಕೆಯ ಶಕ್ತಿ ಜಾಸ್ತಿಯಾಗುತ್ತದೆ. ಹೀಗಾಗಿ ಯಾಂತ್ರೀಕೃತ ಕೃಷಿಗಿಂತ ಗೋ ಆಧಾರಿತ ಕೃಷಿಯೇ ಹೆಚ್ಚು ಪರಿಣಾಮಕಾರಿ ಮತ್ತು ಪ್ರಸ್ತುತವಾಗಿದೆ. ದಿನ ಹೋದಂತೆ ಇದು ಅನಿವಾರ್ಯವೇ ಆಗಬಹುದು. ಕ್ಯೂಬ ದೇಶದಲ್ಲಿ ಯಂತ್ರಗಳಿಲ್ಲದೆ ಕೇವಲ ಗೋ ಆಧಾರಿತ ಮತ್ತು ಸಹಜ ಕೃಷಿಯನ್ನು ಮಾಡಿ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಿದ್ದಾರೆ.

ಪ್ರ: ಗೋ ಜಾಗೃತಿಯಿಂದಾಗಿ ಹಲವಾರು ಕಡೆ ಗೋಶಾಲೆಗಳು ತಲೆಯೆತ್ತಿವೆ. ಇದು ಸಂತಸದ ಸಂಗತಿ. ಆದರೆ ಗೋಮಾಳಗಳ ಕೊರತೆಯಿಂದಾಗಿ ಈ ಗೋವುಗಳನ್ನು ಸಾಕಲು ಕಷ್ಟವಾಗುತ್ತಿದೆ. ಈ ಸಮಸ್ಯೆಗೆ ಪರಿಹಾರವೇನು?

ಉ: ಅಗತ್ಯದ ಅರಿವು ಆದಾಗ ಎಲ್ಲದಕ್ಕೂ ಜಾಗ ಆಗುತ್ತದೆ. ಉದಾಹರಣೆಗೆ ಪೇಟೆಗಳಲ್ಲಿ ಶಾಲೆಗಳಿಗೆ, ಪೋಲೀಸ್ ಸ್ಟೇಶನ್‌ಗೆ, ಕೋರ್ಟಿಗೆ, ಆಟದ ಮೈದಾನಕ್ಕೆ ಎಲ್ಲ ಜಾಗ ಇದೆ. ಗೋವಿನ ಅಗತ್ಯ ಬಂದಾಗ ಗೋವಿಗೂ ಪೇಟೆಗಳಲ್ಲಿ ಜಾಗ ಆಗಬಹುದು, ಗೋಮಾಳದ ವಿಷಯ ಇರಲಿ. ಈ ಅಗತ್ಯತೆಯ ಸರಿಯಾದ ಪ್ರತಿಪಾದನೆ ಆಗಬೇಕಾಗಿದೆ.

ಪ್ರ: ಈ ಅಗತ್ಯತೆಯ ಬಗ್ಗೆ ಜನರಲ್ಲಿ ಅರಿವು ಬಹುಮಟ್ಟಿಗೆ ಇದೆ. ಆದರೆ ಇದನ್ನು ಪರಿಹರಿಸಲು ಯಾರೂ ಮುಂದೆ ಬರುತ್ತಿಲ್ಲ. ಬಹುಶಃ ಇದರಲ್ಲಿ ಸರಕಾರದ ಕೆಲಸ ದೊಡ್ಡಮಟ್ಟದಲ್ಲೇ ಇದೆ. ಗೋಮಾಳಗಳು ಅಂತ ಇತ್ತು ಒಂದು ಕಾಲದಲ್ಲಿ. ಈಗ ಗೋಮಾಳಗಳೇ ಇಲ್ಲ.

ಉ: ಒತ್ತಡದ ಹೊರತಾಗಿ ಯಾವ ಸರಕಾರವೂ ಕೆಲಸ ಮಾಡುವುದಿಲ್ಲ. ಒತ್ತಡ ಜನರಿಂದ ಬರಬೇಕು. ಜನರಿಂದ ಒತ್ತಡ ಬಂದರೆ ಸರಕಾರ ಮಾಡಲೇಬೇಕಾಗುತ್ತದೆ. ಯಾವುದೋ ಸಂತರು ಹೇಳಿದರೆ ಸಾಕಾಗುವುದಿಲ್ಲ. ಜನತೆಯೇ ಆ ವಾತಾವರಣದ ನಿರ್ಮಾಣ ಮಾಡಬೇಕು.

ಪ್ರ:. ಕೆಲವು ಸಮುದಾಯಗಳು "ಗೋವು ನಮ್ಮ ಆಹಾರ ಎನ್ನುತ್ತಾರೆ. ಗೋಹತ್ಯೆ ನಿಷೇಧ ಜಾರಿಗೆ ಬಂದರೆ ನಮ್ಮ ಆಹಾರಕ್ಕೆ ಅಡ್ಡಿ ಮಾಡಿದಂತಾಗುತ್ತದೆ" ಎನ್ನುತ್ತಾರೆ. ಈ ವಾದಕ್ಕೆ ತಮ್ಮ ಉತ್ತರವೇನು?

ಉ: ಇದು ಪೂರ್ತಿ ಅಸಂಬದ್ಧ. ಯಾಕೆಂದರೆ ನೈಸರ್ಗಿಕವಾಗಿ ಮನುಷ್ಯನೇ ಮಾಂಸಾಹಾರಿಯಲ್ಲ. ಪ್ರಕೃತಿ ಮನುಷ್ಯನನ್ನು ಮಾಂಸಾಹಾರಿಯಾಗಿ ನಿರ್ಮಾಣ ಮಾಡಲಿಲ್ಲ. ಮಾಂಸಾಹಾರಿ ಪ್ರಾಣಿಗಳ ದೇಹರಚನೆ ಮನುಷ್ಯನಿಗಿಲ್ಲ.

ಪ್ರ: ಅಂದರೆ ಮನುಷ್ಯ ಯಾವ ಪ್ರಾಣಿಯನ್ನೂ ತಿನ್ನಬಾರದು, ಗೋವು ಮಾತ್ರವಲ್ಲ.

ಉ: ಖಂಡಿತವಾಗಿ. ಉದಾಹರಣೆಗೆ ಹುಲಿ, ಚಿರತೆ, ಇತ್ಯಾದಿ ಮಾಂಸಾಹಾರಿ ಪ್ರಾಣಿಗಳ ಉಗುರು, ಹಲ್ಲು ನೋಡಿ. ಸಾಮಾನ್ಯವಾಗಿ ಮಾಂಸಾಹಾರಿ ಪ್ರಾಣಿಗಳು ನಾಲಿಗೆಯಿಂದ ನೀರು ಕುಡಿಯುತ್ತವೆ. ಶಾಕಾಹಾರಿ ಪ್ರಾಣಿಗಳು ನೇರವಾಗಿ ನೀರಿಗೆ ಬಾಯಿ ಹಾಕಿ ನೀರು ಕುಡಿಯುತ್ತವೆ. ಮನುಷ್ಯನ ದೇಹರಚನೆ ಮಾಂಸಾಹಾರಕ್ಕೆ ಹೇಳಿಮಾಡಿಸಿದಂತಿಲ್ಲ. ಗೋಮಾಂಸ ಪ್ರತ್ಯೇಕ ಉಳಿಯಿತು. ಯಾವ ಮಾಂಸವನ್ನೂ ತಿನ್ನುವಂತೆ ಆತನ ದೇಹರಚನೆ ಇಲ್ಲ. ಇವತ್ತು ಗೋಮಾಂಸ ತಿನ್ನುತ್ತಿರುವುದು ಗೋಮಾಂಸ ಬೇಕು ಎಂದಲ್ಲ. ಗೋಮಾಂಸಕ್ಕೆ ಬೆಲೆ ಕಡಿಮೆ ಎಂದು. ನಾಳೆ ಕುರಿ ಅಥವಾ ಇನ್ಯಾವುದಾದರೂ ಪ್ರಾಣಿಯ ಮಾಂಸಕ್ಕೆ ಬೆಲೆ ಕಡಿಮೆಯಾದರೆ ಆತ ಅದನ್ನು ತಿನ್ನುತ್ತಾನೆ. ಗೋಮಾಂಸ ಆತನಿಗೆ ಅನಿವಾರ್ಯವಲ್ಲ.

ಸಂಪೂರ್ಣ ಗೋಹತ್ಯೆ ನಿಷೇಧ ಮಾಡಿರುವ ದೇಶ ಕ್ಯೂಬ. ಅದು ಕಮ್ಯೂನಿಷ್ಟ್ ದೇಶ. ಅಂದರೆ ಗೋಹತ್ಯೆ ನಿಷೇಧಕ್ಕೂ, ಧರ್ಮಕ್ಕೂ ತಳುಕು ಹಾಕಬೇಕಾಗಿಲ್ಲ. ಆರ್ಥಿಕ ಕಾರಣವೊಂದೇ ಸಾಕು, ಗೋಹತ್ಯೆ ನಿಷೇಧಕ್ಕೆ.

ಇನ್ನೊಂದು ಮುಖ್ಯವಾದ ವಿಷಯವೆಂದರೆ ಗವ್ಯೋತ್ಪನ್ನಗಳು, ಅಂದರೆ ಹಾಲು, ತುಪ್ಪ, ಗೋಮೂತ್ರ, ಗೋಮಯ, ಇವು ಎಷ್ಟು ಒಳ್ಳೆಯದೋ ಗೋಮಾಂಸ ಅಷ್ಟೇ ಕೆಟ್ಟದು. ಗೋವಿನ ಸ್ವಭಾವ ಏನೆಂದರೆ ತಾನು ತಿಂದ ಆಹಾರದಲ್ಲಿಯ ಎಲ್ಲ ಒಳ್ಳೆಯ ಅಂಶಗಳನ್ನು ಗವ್ಯೋತ್ಪನ್ನಗಳ ಮೂಲಕ ನಮಗೆ ನೀಡುತ್ತದೆ. ವಿಷದ ಅಂಶವನ್ನು ತನ್ನಲ್ಲೇ ಅಂದರೆ ತನ್ನ ಮಾಂಸದಲ್ಲಿ ಶೇಖರಿಸಿಡುತ್ತದೆ. ಉತ್ತರ ಪ್ರದೇಶದ ಒಂದು ಪಶುವೈದ್ಯಕೀಯ ವಿಶ್ವವಿದ್ಯಾಲಯ ಈ ಬಗ್ಗೆ ಸಂಶೋಧನೆ ಮಾಡಿ ಸಿದ್ಧವಾದಂತಹ ವಿಷಯ ಇದು.

ಪ್ರ: ಉತ್ತರ ಪ್ರದೇಶ ಮಾತ್ರವಲ್ಲ. ಅಮೇರಿಕಾದಲ್ಲೂ ಈ ಬಗ್ಗೆ ಸಂಶೋಧನೆ ಆಗಿದೆ. ಗರ್ಭಿಣಿ ಹೆಂಗಸರು ಗೋಮಾಂಸ ಭಕ್ಷಿಸುವುದರಿಂದ ಹುಟ್ಟುವ ಮಕ್ಕಳ ಮೇಲೆ ದುಷ್ಪರಿಣಾಮ ಆಗುತ್ತದೆ ಎಂದು ಅಲ್ಲಿ ನಡೆಸಿದ ಸಂಶೋಧನೆಯಿಂದ ಸಿದ್ಧವಾಗಿದೆ. ಈ ಬಗ್ಗೆ ಲೇಖನ ಗೋವಿಶ್ವದಲ್ಲೇ ಬಂದಿದೆ.

ಉ: ಎರಡು ಚಕ್ರಗಳು. ಒಂದು ಗೋಮಾಂಸದ ಚಕ್ರ, ಇನ್ನೊಂದು ಗವ್ಯೋತ್ಪನ್ನದ ಚಕ್ರ. ಗೋಮಾಂಸದ ಚಕ್ರದಲ್ಲಿ ಎಲ್ಲರಿಗೂ ಕೆಟ್ಟದ್ದೇ. ಗೋವಿಗೆ ಹಿಂಸಾಪೂರ್ವಕ ಮರಣ. ರೈತ ಬಡವನಾಗುತ್ತಾನೆ. ಕಟುಕ ಕೆಟ್ಟ ಅನಾರೋಗ್ಯಕರ ವಾತಾವರಣದಲ್ಲಿ ಕೆಲಸ ಮಾಡುತ್ತಾನೆ. ಗೋಮಾಂಸ ತಿನ್ನುವವನಿಗೂ ಕೆಟ್ಟದಾಗುತ್ತದೆ.


ಗವ್ಯೋತ್ಪನ್ನದ ಬಳಕೆ ಜಾಸ್ತಿಯಾದರೆ ರೈತ ಉಳಿಯುತ್ತಾನೆ. ಈ ಬಗ್ಗೆ ಕೆಲಸ ಮಾಡುವವರು ಒಳ್ಳೆಯ ವಾತಾವರಣದಲ್ಲಿ ಕೆಲಸ ಮಾಡುತ್ತಿರುತ್ತಾರೆ. ಗ್ರಾಹಕನಿಗೂ ಒಳ್ಳೆಯದಾಗುತ್ತದೆ. ಆ ಚಕ್ರದಿಂದ ಈ ಚಕ್ರಕ್ಕೆ ಬರುವುದು ಅನಿವಾರ್ಯ. ಗೋಮಾಂಸದ ಬದಲು ಗವ್ಯೋತ್ಪನ್ನಗಳ ರಫ್ತು ಮಾಡಿ. ಎಲ್ಲರಿಗೂ ಒಳ್ಳೆಯದಾಗುತ್ತದೆ.

# ಮೊಳಗಿತು ಗೋಗ್ರಾಮ ಯಾತ್ರೆಯ ಶಂಖನಾದ




**ಕುರುಕ್ಷೇತ್ರ, ಸೆ.30 –** ಗೋ ಸಂರಕ್ಷಣೆ, ಗ್ರಾಮ ಸಂಸ್ಕೃತಿಯ ಪುನಃ ಸ್ಥಾಪನೆಯ ಉದ್ದೇಶವುಳ್ಳ ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ ದೀರ್ಘ ಶಂಖನಾದದೊಂದಿಗೆ ಚಾಲನೆ ಪಡೆಯಿತು.

ಇಲ್ಲಿನ ಥೀಮ್ ಪಾರ್ಕಿನಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ದೊಡ್ಡ ಗೋವಿನ ಮೂರ್ತಿಯಿದ್ದ ವೇದಿಕೆಯಲ್ಲಿ ಕಾರ್ಯಕ್ರಮ ನಡೆಯಿತು. ಗೋಪೂಜೆಯೊಂದಿಗೆ ಕಾರ್ಯಕ್ರಮ ಮುನ್ನಡೆಯಿತು. ಹಲವಾರು ಸಂತ-ಮಹಂತರು ಪಾಲ್ಗೊಂಡಿದ್ದರು. ಅವರು ನುಡಿದದ್ದು ಹೀಗೆ...



**ಪೂಜ್ಯ ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿ – ಯಾತ್ರೆಯ ಸಂಕಲ್ಪ ಶಕ್ತಿ :**

ಸದ್ಯ ನಡೆಯುತ್ತಿರುವ ಗೋಹತ್ಯೆಗೆ ಪ್ರಧಾನ ಕಾರಣ ಅಜ್ಞಾನವಲ್ಲದೇ ಮತ್ತೇನೂ ಅಲ್ಲ. ಈಗ ಪರಿಸ್ಥಿತಿ ಸುಧಾರಿಸುತ್ತಿದೆ. ರೈತರು ಗೋವಿನ ಮಹತ್ತ್ವ – ಉಪಯುಕ್ತತೆ ತಿಳಿಯತೊಡಗಿದ್ದಾರೆ. ಹಾಲು ಕೊಡದ ಹಸು ಕೇವಲ ಹಾಲು ಕೊಡುವ ಹಸುವಿಗಿಂತ ಲಾಭದಾಯಕವಾಗಬಲ್ಲುದು. ಇದರ ಬಗೆಗೆ ತಿಳಿಯದ ರೈತರು ಬರಡು ಹಸುಗಳನ್ನು ಕಸಾಯಿಗೆ ತಳ್ಳುತ್ತಿದ್ದಾರೆ. ಯಥಾರ್ಥದ ಅರಿವೇ ಇದೆಲ್ಲದಕ್ಕೆ ಪರಿಹಾರ. ಯಾತ್ರೆಯ ಪ್ರಮುಖ ಉದ್ದೇಶವೂ ಇದೇ ಆಗಿದೆ. ಗೋವಿನ ಆರ್ಥಿಕ ಸಂಪನ್ನತೆಯನ್ನು ಎತ್ತಿಹಿಡಿಯುವುದು ಹಾಗೂ ರೈತರಲ್ಲಿ ಈ ಬಗೆಗೆ ಜಾಗೃತಿಯನ್ನು ಉಂಟುಮಾಡುವುದು. ದೇಶದ ಇಂದಿನ ಸಮಸ್ಯೆಗೆ ತೋರುತ್ತಿರುವ ಪರಿಹಾರ ಒಂದೇ – ಗೋ ಕೇಂದ್ರಿತ ಗ್ರಾಮಗಳತ್ತ ಮತ್ತೆ ಮರಳುವುದು. ಇದು ಭಾರತದ ಮಹಾನ್ ಸಂತರ ಸಕಾರಾತ್ಮಕ ದೃಷ್ಟಿಯ ಮಹಾನ್ ಮೊತ್ತ. ಗೋವು, ಗ್ರಾಮ, ಪ್ರಕೃತಿಯ ಕಡೆಗೆ ಮತ್ತೆ ಮರಳುವ. ನಮ್ಮ ಭಾರತವನ್ನು ಉಳಿಸುವ ಎಂದು ಹೇಳಿದರು.

**ಗಾಯತ್ರೀ ಪರಿವಾರದ ಪೂಜ್ಯ ಡಾ. ಪ್ರಣವ್ ಪಂಡ್ಯಾಜೀಯವರು ತಮ್ಮ ಸಂದೇಶದಲ್ಲಿ:**

ಗ್ರಾಮ ಸಂಸ್ಕೃತಿ ನಷ್ಟವಾಗುತ್ತಿದೆ. ನಗರಗಳು ಎಗ್ಗಿಲ್ಲದೇ ಬೆಳೆಯುತ್ತಿದ್ದು, ಅಶಾಂತಿ, ಅರಾಜಕತೆ ಹಾಗೂ ಭಯೋತ್ಪಾದನೆಯನ್ನು ಹರಡುತ್ತಿದೆ. ಈ ಯಾತ್ರೆ ಭಾರತದ ನಾಲ್ಕೂ ದಿಕ್ಕುಗಳನ್ನು ಒಗ್ಗೂಡಿಸಿ, ಸಂಕಷ್ಟ ನಿವಾರಿಸುತ್ತದೆ. ಗೋಹತ್ಯೆಯನ್ನು ತಡೆದು, ಗೋವನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿ ಘೋಷಿಸಲು ಆಗ್ರಹಿಸಿದರು.



**ಸಿ.ಬಿ.ಐ. ಮಾಜಿ ನಿರ್ದೇಶಕ ಸರ್ದಾರ್ ಶ್ರೀ ಜೋಗಿಂದರ್ ಸಿಂಗ್:**

ಅಕ್ಬರ್ ಗೋಹತ್ಯೆಯ ಮೇಲೆ ಪ್ರತಿಬಂಧ ಹೇರಿದ್ದ. ಬಾಬರ್, ಜಹಾಂಗೀರರೂ ಅಂಶತಃ ಹೇರಿದ್ದರು. ಈಗ ಗೋಹತ್ಯೆಯ ಮೇಲೆ ಪೂರ್ಣ ಪ್ರತಿಬಂಧವನ್ನು ಹೇರಬೇಕು.

**ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶ್ರೀ ಭಯ್ಯಾಜೀ ಜೋಷಿ:**

ಗ್ರಾಮ ಸಭ್ಯತೆಗೆ ಪುನಃ ಜೀವ ತುಂಬಲು ಯಾತ್ರೆ ಹೊರಡುತ್ತಿದೆ. ಭಾರತದ ಸರ್ವಾಂಗೀಣ ಅಭಿವೃದ್ಧಿ ಆಗಬೇಕಿದ್ದಲ್ಲಿ ಯೋಜನೆಗಳು ಗ್ರಾಮ ಮುಖಿಯಾಗಬೇಕು. ಮಹಾತ್ಮಾ ಗಾಂಧಿ, ಜಯಪ್ರಕಾಶ್ ನಾರಾಯಣ್, ವಿನೋಬಾ ಭಾವೆಯವರ ಕನಸೂ ಇದೇ ಆಗಿತ್ತು. ಹಾಗಾದರೆ ಒಳ್ಳೆಯದು.



**ಪೇಜಾವರ ಮಠದ ಪೂಜ್ಯ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳ್:**

ಹುಲಿ ರಾಷ್ಟ್ರೀಯ ಪ್ರಾಣಿ ಆಗಿರುವುದರಿಂದಲೇ ಅಪರಾಧ, ಆತಂಕ ಹೆಚ್ಚುತ್ತಿದೆ. ಅದೇ ಗೋವನ್ನು ರಾಷ್ಟ್ರೀಯ ಪ್ರಾಣಿ ಮಾಡಿದಲ್ಲಿ ಶಾಂತಿ ತನ್ನಿಂದ ತಾನೇ ನೆಲೆಸುತ್ತದೆ.



**ವಿಶ್ವ ಹಿಂದೂ ಪರಿಷತ್ತಿನ ಅಂತಾರಾಷ್ಟ್ರೀಯ ಅಧ್ಯಕ್ಷ ಶ್ರೀ ಅಶೋಕ್ ಸಿಂಘಲ್:**

ಭಾರತವನ್ನು ಅಧ್ಯಾತ್ಮಿಕ ರಾಷ್ಟ್ರವೆಂದು ಘೋಷಿಸಬೇಕು. ವಿದೇಶೀ ಮಾದರಿಯ ಆಡಳಿತ ಶೈಲಿಯಿಂದಾಗಿ ಗೋಹತ್ಯೆ ನಡೆಯುತ್ತಿದೆ. ಈ ಷಡ್ಯಂತ್ರದಿಂದಾಗಿ ಕಳೆದ ಹತ್ತು ವರ್ಷಗಳಲ್ಲಿ 4 ಕೋಟಿ ಹಸುಗಳ ಹತ್ಯೆ ಆಗಿದೆ.

ಇವರಲ್ಲದೇ ಪೂಜ್ಯ ಶ್ರೀ ವಾಸುದೇವಾನಂದ ಸರಸ್ವತೀ ಸ್ವಾಮೀಜಿ, ಚಲನಚಿತ್ರ ಕಲಾವಿದ ಶ್ರೀ ಸುರೇಶ್ ಒಬೆರಾಯ್ ಉಪಸ್ಥಿತರಿದ್ದರು.